PW : 1

# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

## **Misc No**. 4/2025

ದಿನಾಂಕಃ 23.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಪಾಟಿಸವಾಲು 1 ನೇ ಎದುರುದಾರರ ಪರ ಶ್ರೀ K.N.S. ವಕೀಲರಿಂದಃ**

2015-16 ರಲ್ಲಿ ನಮ್ಮ ಕುಟುಂಬ ಆರ್ಥಿಕ ಸಂಕಷ್ಟದಲ್ಲಿ ಇರಲಿಲ್ಲ. ಆ ಸಮಯದಲ್ಲಿ ಬ್ಯಾಂಕ್ ಸಾಲಗಳಿದ್ದವು. ಕಾರ್ಪೋರೇಶನ್ ಬ್ಯಾಂಕ್ ನಲ್ಲಿ ಸಾಲವಿತ್ತು ಎಷ್ಟು ಎಂದು ಗೊತ್ತಿಲ್ಲ. ಖಾಸಗಿ ಸಾಲಗಳ ಬಗ್ಗೆ ಗೊತ್ತಿಲ್ಲ. ಸಾಲಗಳ ಬಗ್ಗೆ ನನಗೆ ಯಾವಾಗ ಗೊತ್ತಾಯಿತು ಎಂದು ನನಗೆ ನೆನಪಿಲ್ಲ. ಸಾಲಗಳು ಇದ್ದ ಬಗ್ಗೆ ಒ.ಎಸ್. 429-2015 ರ ವಾದಪತ್ರದಲ್ಲಿ ಹೇಳಿರುತ್ತೇನೆ. ಸದರಿ ವಾದಪತ್ರದ 3 ನೇ ಪ್ಯಾರಾದಲ್ಲಿ ಎಲ್ಲಾ ವಿಷಯವನ್ನು ನಾನೇ ಬರೆಸಿರುತ್ತೇನೆ. ನಿಪಿ1 ರ ಸದರಿ ಭಾಗವನ್ನು **ನಿಪಿ1(ಎ)** ಎಂದು ಗುರುತಿಸಲಾಯಿತು. ಅಲ್ಲಿ ಬರೆಸಿದಂತೆ ಬೊಡ್ಡ ಎಂದರೆ ವ್ಯವಹಾರ ಜ್ಞಾನ ಇಲ್ಲದವರು ಎಂದು ಅರ್ಥ. ಅಂದರೆ ಪಾಪದ ಜನ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ನನ್ನ ತಂದೆ ನನ್ನ ತಾಯಿಯೊಂದಿಗೆ ಚೆನ್ನಾಗಿರಲಿಲ್ಲ. 2016 ರಲ್ಲಿ ನನ್ನ ತಂದೆ ಮತ್ತು ತಾಯಿ ಒಂದೇ ಮನೆಯಲ್ಲಿ ವಾಸವಿದ್ದರು. ನಿಪಿ1 ರ ದಾವೆಯಲ್ಲಿ ಉಳಿದ ವಾದಿಗಳ ಪರವಾಗಿ ನಾನೇ ಸಹಿ ಹಾಕಿರುತ್ತೇನೆ. ಸದರಿ ದಾವೆಗೆ ಅನುಭವ ಕೊಡಲು ಹೋದಾಗ ನನ್ನ ತಾಯಿಯನ್ನು ಕರೆದುಕೊಂಡು ಹೋಗಿದ್ದು, ಅವರಿಗೆ ದಾವೆಯ ಬಗ್ಗೆ ಮಾಹಿತಿ ಇತ್ತಾ ಎಂದರೆ ಇತ್ತು. ಸದರಿ ವಾದಪತ್ರದಲ್ಲಿ ಮಕ್ಕಳನ್ನು ಮತ್ತು ನನ್ನ ತಾಯಿಯನ್ನು ನಮ್ಮ ತಂದೆ ಡಾಮಿನೇಟ್ ಮಾಡುತ್ತಿದ್ದರು ಎಂದು ಹೇಳಿರುವುದಿಲ್ಲ. ಡಾಮಿನೇಟ್ ಮಾಡುತ್ತಿದ್ದ ಬಗ್ಗೆ ಈ ಅರ್ಜಿಯಲ್ಲಿ ಪ್ರಥಮ ಬಾರಿ ಹೇಳಿರುತ್ತೇವೆ. ನನ್ನ ತಂದೆ ವ್ಯವಹಾರ ಜ್ಞಾನ ಇಲ್ಲದ ದಡ್ಡ, ಎಲ್ಲದಕ್ಕೂ ನಗಾಡುತ್ತಾರೆ ಎನ್ನುವ ವಿಚಾರವನ್ನು ಈ ಅರ್ಜಿಯಲ್ಲಿ ತಿಳಿಸಿರುವುದಿಲ್ಲ.

PW : 1

2019 ರಲ್ಲಿ ಕೂಡಾ ನನ್ನ ತಂದೆ-ತಾಯಿ ಒಂದೇ ಮನೆಯಲ್ಲಿ ಒಟ್ಟಿಗೆ ಇದ್ದರು. ಅವರಿಬ್ಬರಿಗೆ ಮಾತುಕತೆ ಇತ್ತು, ಹೆಚ್ಚಿರಲಿಲ್ಲ. ಒ.ಎಸ.24/2019 ರ ದಾವೆಯ ಬಗ್ಗೆ ತಾಯಿ ಹೇಳಿರುತ್ತಾರಾ ಎಂದರೆ ಮೊದಲು ಹೌದು ಎಂದು ಹೇಳಿ, ನಂತರ e-courts ನಲ್ಲಿ ತಿಳಿಯಿತು ಎನ್ನುತ್ತಾರೆ. ನಿಪಿ1 ರ ದಾವೆಯ ಬಗ್ಗೆ e-courts ನಲ್ಲಿ ನೋಡುತ್ತಿದ್ದರಾ ಎಂದರೆ 2020-21 ರಿಂದ ನೋಡುತ್ತಿದ್ದೆನು. e-courts ನ್ನು ಉಪಯೋಗಿಸಲು ಸ್ವಲ್ಪ ಮಟ್ಟಿನ ಜ್ಞಾನ ನನಗೆ ಆ ಸಮಯ ಇತ್ತು. e-courts ನ್ನು ಉಪಯೋಗಿಸಲು ಸ್ವಲ್ಪ ಮಟ್ಟಿನ ಜ್ಞಾನ ಸಾಕು ಎಂದರೆ ನನಗೆ ಗೊತ್ತಿಲ್ಲ.

ಒ.ಎಸ್.15-2010 ರ ಡಿಕ್ರೀಯನ್ನು ರದ್ದು ಮಾಡಲು ನನ್ನ ತಂದೆ ಮಿಸ್ ಕೇಸ್ ಹಾಕಿದ್ದಾರಾ ಎಂದರೆ ಗೊತ್ತಿಲ್ಲ. ಅದರ ಬಗ್ಗೆ e-courts ನಲ್ಲಿ ನೋಡಿದ ಬಗ್ಗೆ ನೆನಪಿಲ್ಲ. ನನ್ನ ತಂದೆಯ ವಿರುದ್ಧ ಹಲವಾರು ಪ್ರಕರಣಗಳು ದಾಖಲಾದ ಬಗ್ಗೆ 2015 ರಲ್ಲಿ ನಿಪಿ1 ನ್ನು ದಾಖಲು ಮಾಡುವಾಗ ಗೊತ್ತಿತ್ತಾ ಎಂದರೆ ಸ್ವಲ್ಪ ಮಟ್ಟಿಗೆ ಗೊತ್ತಿತ್ತು. 2015 ರಲ್ಲಿ ನನ್ನ ತಂದೆ ಬೇರೆ ಬೇರೆ ವ್ಯಕ್ತಿಗಳಿಗೆ ಆಸ್ತಿ ಮಾರಾಟ ಮಾಡಿದ ಬಗ್ಗೆ ಗೊತ್ತಿತ್ತು. ಸದರಿ ದಾವೆ ದಾಖಲಿಸಲು ಯಾವೆಲ್ಲ ವ್ಯವಹರಣೆಗಳಾಗಿವೆ ಎಂದು ನೋಡಿ, ಪರಿಶೀಲಿಸಿದ ನಂತರ ನಾನು ದಾವೆ ಹೂಡಿರುತ್ತೇನೆ. 2019 ರಲ್ಲಿ ಈ ದಾವೆ ದಾಖಲಾದ ಬಗ್ಗೆ ನನಗೆ ನೋಟೀಸು ನನ್ನ ಕುಟುಂಬದ ಹಿರಿಯ ವ್ಯಕ್ತಿಯ ಮೂಲಕ ಜಾರಿಯಾಗಿದ್ದು, ಬೇಲೀಫ್ ರು ಅದೇ ರೀತಿ ವರದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಬೇಲೀಪ್ ರಿಪೋರ್ಟ್ ನಿಪಿ-5 ರಿಂದ 8 ನ್ನು ನಾನು ಓದಿ ನಂತರ ತಿಳಿದುಕೊಂಡಿರುತ್ತೇನೆ. ಅದರಲ್ಲಿ ನನ್ನ ತಂದೆಯವರ ಮೂಲಕ ಜಾರಿಯಾಗಿದೆ ಎಂದು ಬರೆಯಲಾಗಿರುತ್ತದೆ ಎಂದರೆ ನೆನಪಿಲ್ಲ. ನಿಪಿ5 ರಿಂದ 8 ನ್ನು ಓದಿ ಹೇಳಲಾಗಿ ಹೌದು ಎನ್ನುತ್ತಾರೆ. ನಿಪಿ-5 ರಿಂದ 8ರಂತೆ ನೋಟೀಸು ಜಾರಿಯಾದ ಬಗ್ಗೆ ನನಗೆ ಗೊತ್ತಿದ್ದರೂ ಉದ್ದೇಶಪೂರ್ವಕವಾಗಿ ದಾವೆಯಲ್ಲಿ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಕಾರ್ಪೊರೇಶನ್ ಬ್ಯಾಂಕಿನ ಪರವಾಗಿ ಹಾಜರಾದ ಬಗ್ಗೆ ನನಗೆ ಗೊತ್ತಿಲ್ಲ. ಕಾರ್ಪೊರೇಶನ್

PW : 1

ಬ್ಯಾಂಕಿನಿಂದ ಸದರಿ ದಾವಾ ಜಾಗವನ್ನು ಸಾಲಕ್ಕೆ ಅಡವು ಮಾಡಿದ್ದರಿಂದ ಮಾರಾಟ ಮಾಡಬೇಕೆಂದು DRT ಯಲ್ಲಿ ಡಿಕ್ರೀಯಾಗಿರುತ್ತದೆ ಎಂದರೆ ಗೊತ್ತಿದೆ. ಅದರ ನೋಟೀಸು ಕೂಡಾ ನಮಗೆ ಜಾರಿಯಾಗಿರುವುದಿಲ್ಲ. ಡಿಕ್ರೀ ಮತ್ತು ಅವಾರ್ಡ್ ಆದ ಬಗ್ಗೆ ಯಾವಾಗ ಗೊತ್ತಾಯಿತು ಎಂದರೆ ಈಗ ಗೊತ್ತಾಯಿತು, ನಿಖರವಾಗಿ ಯಾವ ವರ್ಷ ಎಂದು ಗೊತ್ತಿಲ್ಲ, ನೆನಪಿಲ್ಲ. ಸದರಿ ಅವಾರ್ಡ್ ನ್ನು ನಾವು ಪ್ರಶ್ನಿಸಿರುವುದಿಲ್ಲ. Exparte ಆದೇಶವನ್ನು ರದ್ದು ಮಾಡಲು ಅರ್ಜಿ ಹಾಕುತ್ತೀರಾ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ನನ್ನ ಮತ್ತು ನನ್ನ ತಂದೆ ತೀರ್ಪು ಆಗುವವರೆಗೆ ಕಾಯ್ದು ನಂತರ ನಮಗೆ ನೋಟೀಸು ಬರಲಿಲ್ಲ ಎಂದು ಅರ್ಜಿ ಸಲ್ಲಿಸುವುದು ನಮ್ಮ ಕ್ರಮ ಎಂದರೆ ಸರಿಯಲ್ಲ. ಸಮಯ ಪಡೆದುಕೊಳ್ಳಲು, ಡಿಕ್ರೀ ಜಾರಿಯಾಗುವುದನ್ನು ಮುಂದೆ ಹಾಕಲು ನ್ಯಾಯಾಲಯದ ಪ್ರಕ್ರಿಯೆಯನ್ನು ನಾವು ದುರುಪಯೋಗಪಡಿಸಿಕೊಳ್ಳುತ್ತಿದ್ದೇವೆ ಎಂದರೆ ಸರಿಯಲ್ಲ. ಡಿಕ್ರೀಯನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿ ನ್ಯಾಯಾಂಗ ಶುಲ್ಕ ಕಟ್ಟಬೇಕಾಗುತ್ತದೆ ಎಂದು ಈ ರೀತಿ ಅರ್ಜಿ ಸಲ್ಲಿಸುತ್ತಿದ್ದೀರಾ ಎಂದರೆ ಸರಿಯಲ್ಲ. ಮೇಲ್ಮನವಿ ಸಲ್ಲಿಸಿದ ಬಗ್ಗೆ ವಕೀಲರಿಗೆ ಹೇಳಿರುವುದಿಲ್ಲ. ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳಿ, ಸುಳ್ಳು ಅನುಭವ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲು 3 ನೇ ಎದುರುದಾರರ ಪರ ಶ್ರೀ DSB ವಕೀಲರಿಂದಃ**

ದಾವಾ ಆಸ್ತಿಯಲ್ಲಿ ಕೃಷಿ ಭೂಮಿ ಮತ್ತು ಮನೆ ಇವೆ ಎಂದರೆ ಸರಿ . ತೋಟದ ಮತ್ತು ಮನೆಯ ವ್ಯವಹಾರಗಳನ್ನು ತಂದೆಯೇ ನೋಡಿಕೊಳ್ಳುತಿದ್ದರಾ ಎಂದರೆ ಮನೆಯ ವ್ಯವಹಾರವನ್ನು ತಾಯಿ ನೋಡಿಕೊಳ್ಳುತ್ತಿದ್ದರು. 2003-04 ರಲ್ಲಿ 3ನೇ ಎದುರುದಾರರಿಂದ ನನ್ನ ತಂದೆ ಸಾಲ ಪಡೆದಿದ್ದರು. ಕೃಷಿ ಅಭಿವೃದ್ಧಿಗೆ ನನ್ನ ತಂದೆ ಅದೇ ಬ್ಯಾಂಕಿನಿಂದ ಸಾಲ ಪಡೆದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ದಾವಾ ಆಸ್ತಿ ಹಾಗೂ ಮನೆಯ ಬಗ್ಗೆ 2003 ರಿಂದ ಕೃಷಿ ಮತ್ತು ಕ್ರಾಪ್ ಲೋನ್ ಗಳನ್ನು ಪಡೆಯುತ್ತಿದ್ದರು ಆದರೆ ಮನೆ ಸಾಲ ಅಲ್ಲ ಎಂದರೆ ಗೊತ್ತಿಲ್ಲ. ಮನೆ ಸಾಲ ಪಡೆದ ಸಂಗತಿ ನನಗೆ ಬ್ಯಾಂಕ್ ನವರು ಮನೆಗೆ 2008-09 ರಲ್ಲಿ ಬಂದಾಗ ತಿಳಿಯಿತು.

PW : 1

**ಮರುವಿಚಾರಣೆಃ ಇಲ್ಲ.**

ನನ್ನ ಉಕ್ತಲೇಖನದ ರೀತ್ಯಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು, ಪುತ್ತೂರು